**<u>ಸಾಕ್ಷಿಯನ್ನು ದಿನಾಂಕ 27.07.2026 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಆರ್ ಎಂ ಕೆ ವಕೀಲರಿಂದಃ</u>**

ನಾನು ಎಸ್ ಎಸ್ ಎಲ್ ಸಿ ಯವರಿಗೆ ವ್ಯಾಸಂಗ ಮಾಡಿದ್ದೇನೆ. ವಾದಿ ಶ್ರೀನಾಥ ನನ್ನ ಮೈದುನ. ನಾರಾಯಣಸ್ವಾಮಿ ನನ್ನ ಮಾವ. ಅವರು ತೀರಿಕೊಂಡು 11 ವರ್ಷವಾಗಿದೆ. ನನ್ನ ಮದುವೆ 1990 ರಲ್ಲಿ ಮದುವೆಯಾಗಿದೆ. ಮದುವೆಯಾದಾಗಿನಿಂದಲೂ ನಾನು ನನ್ನ ಗಂಡನ ಜೊತೆ ಬೇಗೂರಿನಲ್ಲಿದ್ದೇನೆ. ನನ್ನ ಮೈದ ಕೇಸ ಹಾಕಿರುವ ವಿಚಾರ ತಿಳಿದಿದೆ. ಒಟ್ಟು 9 ಆಸ್ತಿಗಳ ಮೇಲೆ ಕೇಸು ತರಲಾಗಿದೆ. ಸರ್ವೆ ನಂ. 192/3, 55/ಪಿ2, 136/6, 136/9, 3 ಪಿ7, 182, 184 ಆಸ್ತಿಗಳ ಮೇಲೆ ತರಲಾಗಿದೆ. ಒಂದು ಕೋ ಆಪರೇಟಿವ್ ಸೊಸೈಟಿ ಮತ್ತು ಆರ್ ಟಿ ಓ ಮೇಲೆ ಹಾಕಿದ್ದಾರೆ.

**<u>ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.</u>**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.